**KARNATAKA NURSING & PARAMEDICAL SCIENCES EDUCATION (REGULATION) AUTHORITY**
ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ

# PARA MEDICAL BOARD

# 40/20A, Lakshmi Complex, First Floor, Opp. Vani Vilas Hospital, Fort, Bengaluru-560002
**Ph No**: 080-26702159 **Email**: pmboffice97@gmail.com / pmbexamination@gmail.com

PMB/430/2020-21 Date: 17.08.2022

## ಸುತ್ತೋಲೆ

ವಿಷಯ: ಪ್ಯಾರಾ ಮೆಡಿಕಲ್ ಡಿಪ್ಲೊಮ ಥಿಯರಿ ಪರೀಕ್ಷೆಯ ಉತ್ತರ ಪತ್ರಿಕೆಯಲ್ಲಿನ color Codeನ ಬದಲಾವಣೆ ಬಗ್ಗೆ.

******

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಳಿಯ ಜೊತೆ ಸಂಯೋಜನೆ ಹೊಂದಿರುವ ಎಲ್ಲಾ ಪ್ಯಾರಾ ಮೆಡಿಕಲ್ ಕಾಲೇಜುಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಲಿಚ್ಚಿಸುವುದೇನೆಂದರೆ, ಇಲ್ಲಿಯವರೆಗೆ ಮಂಡಳಿಯ ಥಿಯರಿ ಪರೀಕ್ಷೆಯಲ್ಲಿ, 100 ಅಂಕಗಳ ಪ್ರಶ್ನೆ ಪತ್ರಿಕೆಗೆ ಉತ್ತರಿಸಲು 36ಪುಟಗಳ Green Answer Booklet ಹಾಗೂ Sec A & Sec B ಇರುವ ಪ್ರಶ್ನೆಪತ್ರಿಕೆಗಳಿಗೆ ಉತ್ತರಿಸಲು, 24 ಪುಟಗಳ Blue color & Red color answer booklets ಗಳನ್ನು ಪ್ರತ್ಯೇಕವಾಗಿ ಮತ್ತು Sec A, Sec B & Sec C ಇರುವ ಕೆಲವು ಕೋರ್ಸುಗಳ ಪ್ರಶ್ನೆ ಪತ್ರಿಕೆಗೆ ಉತ್ತರಿಸಲು Blue color, Red color & Purple color answer booklets ಗಳನ್ನು ಪ್ರತ್ಯೇಕವಾಗಿ ವಿತರಿಸಲಾಗುತ್ತಿತ್ತು.

ಈ ಮೇಲಿನ color code answer bookletsಗಳನ್ನು ಪರೀಕ್ಷಾ ಸಮಯದಲ್ಲಿ ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಸರಿಯಾಗಿ ವಿತರಿಸದೆ ಅದಲು ಬದಲಾಗಿ ವಿತರಿಸುವುದು ಮತ್ತು ವಿದ್ಯಾರ್ಥಿಗಳೂ ಕೂಡ ಅದಲು ಬದಲಾಗಿ ಉತ್ತರಿಸುವುದು ಕಂಡುಬಂದಿರುವ ಕಾರಣದಿಂದ ಈ ರೀತಿಯ ತಪ್ಪುಗಳನ್ನು ಪತ್ತೆ ಮಾಡಿ ಸರಿ ಪಡಿಸುವುದಕ್ಕೆ ತುಂಬಾ ಸಮಯ ವ್ಯರ್ಥ ವಾಗುತ್ತಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ಕೇವಲ 2 color coded answer booklets ಗಳನ್ನು ಅಂದರೆ 100 ಅಂಕಗಳ ಪ್ರಶ್ನೆ ಪತ್ರಿಕೆಗೆ(Sec A, Sec B & Sec C ಇರುವ ಪ್ರಶ್ನೆ ಪತ್ರಿಕೆಗಳು ಸೇರಿದಂತೆ) 36 ಪುಟಗಳ Green Answer Booklet ನ್ನು ವಿತರಿಸಲು ತೀರ್ಮಾನಿಸಲಾಗಿದೆ. ಹಾಗೆಯೇ ಪ್ರಶ್ನೆ ಪತ್ರಿಕೆಯಲ್ಲಿ ಪ್ರಶ್ನೆಗಳ ಕ್ರಮ ಸಂಖ್ಯೆಯಲ್ಲಿಯೂ ಬದಲಾವಣೆ ಮಾಡಿದ್ದು Sec A, Sec B & Sec C ಮೂರು ವಿಭಾಗಗಳೂ continues question number ನೀಡಲಾಗುವುದು.

ಮುಂದುವರೆದು Sec A & Sec B ಒಂದೇ ಪ್ರಶ್ನೆ ಪತ್ರಿಕೆ ಇರುವ 50+50 ಅಂಕಗಳ ಪ್ರಶ್ನೆಗಳಿಗೆ ಉತ್ತರಿಸಲು 36 ಪುಟಗಳ Green Answer Booklet ನ್ನು ಉಪಯೋಗಿಸುವುದು. ಇಲ್ಲಿಯೂ ಕೂಡ ಪ್ರಶ್ನೆಗಳ ಕ್ರಮ ಸಂಖ್ಯೆ continues question number ಆಗಿರುತ್ತದೆ.

ಕೆಲವು ಕೋರ್ಸ್‌ಗಳ(II DMIT, III DMRT, II DDM, II DDH) ಪ್ರಶ್ನೆಪತ್ರಿಕೆಗಳು(RS-1 & RS-2 schemeನಲ್ಲಿ) 50 ಮತ್ತು 50ಕ್ಕಿಂತ ಕಡಿಮೆ ಅಂಕಗಳ ಒಂದೇ(single) ಪ್ರಶ್ನೆ ಪತ್ರಿಕೆಯಾಗಿದ್ದು, ಅಂತಹ ಪ್ರಶ್ನೆ ಪತ್ರಿಕೆಗಳಿಗೆ ಮಾತ್ರ ಉತ್ತರಿಸಲು 24 ಪುಟ್ಟಗಳ Blue color answer bookletsನ್ನು ಉಪಯೋಗಿಸುವುದು.

ಉದಾಹರಣೆಗೆ Diploma in Dental Hygeine(DDH) courseನಲ್ಲಿ Sec A & Sec B ಸೇರಿ 50 ಅಂಕಗಳ ಪ್ರಶ್ನೆ ಪತ್ರಿಕೆಯಿರುವ ಕಡೆ, 24 ಪುಟಗಳ ಒಂದೇ Blue color answer bookletನ್ನು ಉಪಯೋಗಿಸುವುದು. ಈ ಮೇಲಿನ ಪ್ರಯೋಗವನ್ನು ಏಪ್ರೀಲ್ 2022ರಲ್ಲಿ ನಡೆದ ಪೂರಕ ಪರೀಕ್ಷೆಯಲ್ಲಿ ಯಶಸ್ವಿಯಾಗಿ ನಡೆಸಿರುವ ಹಿನ್ನೆಲೆಯಲ್ಲಿ ಸದರಿ ಮಾದರಿಯನ್ನು ಅಕ್ಟೋಬರ್ 2022ರಲ್ಲಿ ನಡೆಯಲಿರುವ ವಾರ್ಷಿಕ ಪರೀಕ್ಷೆಯಲ್ಲಿಯೂ ಮುಂದುವರಿಸಲು ತೀರ್ಮಾನಿಸಲಾಗಿದೆ. ಉತ್ತರ ಪತ್ರಿಕೆಯ Part-I ವಿಭಾಗದ QP Code ನಮೂದಿಸುವ columnನಲ್ಲಿ Sec A, Sec B & Sec C ವಿಭಾಗಗಳಿರುವಲ್ಲಿ Sec A ವಿಭಾಗದ QP Code ನ್ನು ಮಾತ್ರ ತಪ್ಪದೇ ನಮೂದಿಸಿ ಅದಕ್ಕೆ ಸರಿ ಹೊಂದುವ circleಗಳನ್ನು ಭರ್ತಿ ಮಾಡುವುದು.

Sec A & Sec B ವಿಭಾಗಗಳ ಪ್ರಶ್ನೆಗಳಿಗೆ ಉತ್ತರಿಸಿರುವ ಉತ್ತರ ಪತ್ರಿಕೆಗಳನ್ನು ಆಯಾ ವಿಷಯದ ಶಿಕ್ಷಕರುಗಳೇ ಮೌಲ್ಯಮಾಪನ ಮಾಡಲು ಅವಕಾಶ ನೀಡಲಾಗಿದೆ. ಉದಾಹರಣೆಗೆ Sec A Biochemistry, Sec B Microbiology ಇರುವ ಕಡೆ Biochemistry & Microbiology ವಿಷಯದ ಮೌಲ್ಯಮಾಪಕರುಗಳು ಪ್ರತ್ಯೇಕವಾಗಿ ಉತ್ತರ ಪತ್ರಿಕೆಯನ್ನು 2 ಸಲ ಮೌಲ್ಯಮಾಪನ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರಲು ಹಾಗೂ ಮುಂದಿನ 2022ರ ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಪೂರಕ ಪರೀಕ್ಷೆಯಿಂದಲೇ ಈ ನಿಯಮವನ್ನು ಪ್ರಾಯೋಗಿಕವಾಗಿ ಅಳವಡಿಸುತ್ತಿರುವ

ಈ ಹಿನ್ನೆಲೆಯಲ್ಲಿ ಮಂಡಳಿಯ ಮುಂದಿನ ವಾರ್ಷಿಕ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳು ಸೇರಿದಂತೆ ಇತರ ಎಲ್ಲಾ ಅರೆ ವೈದ್ಯಕೀಯ ಕೋರ್ಸ್‌ಗಳ ವಿದ್ಯಾರ್ಥಿಗಳು ಮಂಡಳಿಯ ವೆಬ್‌ಸೈಟ್‌ನಲ್ಲಿ ಈ ಬಗ್ಗೆ ಪ್ರಕಟಿಸಿರುವ ವಿವರಗಳನ್ನು ವೀಕ್ಷಿಸಿ ತಿಳಿದುಕೊಳ್ಳಲು ಸೂಚಿಸಲಾಗಿದೆ.

ಈ ಪತ್ರದೊಂದಿಗೆ ಮಂಡಳಿಯು ಹಾಲಿ ನಡೆಸುತ್ತಿರುವ ಎಲ್ಲಾ ಕೋರ್ಸ್‌ಗಳ ವಿಷಯಗಳ ಪ್ರಶ್ನೆಪತ್ರಿಕೆಗಳ Code number ಹಾಗೂ ಉತ್ತರಿಸಬೇಕಾದ ಉತ್ತರ ಪತ್ರಿಕೆಗಳ color codeನ್ನು ನಮೂದಿಸಿ ಪ್ರಕಟಿಸಲಾಗಿದೆ. ಸದರಿ ವಿಷಯವನ್ನು ಕಾಲೇಜಿನ ನೋಟೀಸ್ ಬೋರ್ಡ್‌ನಲ್ಲಿ ವಿದ್ಯಾರ್ಥಿಗಳ ಗಮನಕ್ಕಾಗಿ ಪ್ರಕಟಿಸಲು ಈ ಮೂಲಕ ಸೂಚಿಸಲಾಗಿದೆ.

18/8/22

ಸದಸ್ಯ ಕಾರ್ಯದರ್ಶಿಗಳು
ಅರೆ ವೈದ್ಯಕೀಯ ಮಂಡಳಿ
ಬೆಂಗಳೂರು